| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 116/2019 | | | |
| ಸಾಕ್ಷಿದಾರರ ಹೆಸರು | ಲಕ್ಷ್ಮೀನಾರಾಯಣ | | |
| ತಂದೆ ಹೆಸರು | ಸಬ್ಬರಾಯಪ್ಪ | ಪಿಡಬ್ಲ್ಯೂ: | 2 |
| ವಯಸ್ಸು | 45 ವರ್ಷ | ಸಿಡಬ್ಲ್ಯೂ: | 2 |
| ಉದ್ಯೋಗ | ಕೆ ಇ ಬಿ ಕೆಲಸ | ಪ್ರಮಾಣ ವಚನ | |
| ವಾಸ ಸ್ಥಳ | ಪಾಪತಿಮ್ಮನಹಳ್ಳಿ | ಭೋದಿಸಿದ ದಿನಾಂಕ | 22-06-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುತ್ತಾರೆ. ಚಾಸಃ1 ರವರು ನನ್ನ ಚಿಕ್ಕಪ್ಪ. 1 ನೇ ಆರೋಪಿ ನನ್ನ ಚಿಕ್ಕಪ್ಪ. 2 ಮತ್ತು 4 ನೇ ಆರೋಪಿಗಳು ಗೊತ್ತಿರುವುದಿಲ್ಲ. ನಮ್ಮದು ಮೊದಲಿಗೆ ಒಟ್ಟು ಕುಟುಂಬ ಇದ್ದು ಆಸ್ತಿ ಇದ್ದು 1989 ರಲ್ಲಿ ನನ್ನ ದೊಡ್ಡಪ್ಪನಾದ ಪಟೇಲ್ ವೆಂಕಟರಾಯಪ್ಪ ಜಮೀನನ್ನು ಗೋಪಸಂದ್ರದ ಊಲವಾಡಿ ಗ್ರಾಮದ ಖಾತೆ ನಂ.621/241/3 ಸೈಟ್ ಅನ್ನು 30 ಇಂಟು 40 ಅಡಿಗಳ ನಿವೇಶನವನ್ನು ಚಿಕ್ಕವೆಂಕಟಪ್ಪರವರಿಂದ ಖರೀದಿ ಮಾಡಿದ್ದು, ನನ್ನ ದೊಡ್ಡಪ್ಪ 1991 ರಲ್ಲಿ ಮೃತಪಟ್ಟಿದ್ದು, 2013 ನೇ ಇಸ್ವಿಯಲ್ಲಿ ನನ್ನ ಚಿಕ್ಕಪ್ಪನಾದ ವೆಂಕಟರಾಯಪ್ಪರವರು ನಾನೇ ವೆಂಕಟರಾಯಪ್ಪ ಅಂತ ಹೇಳಿ ನಕಲು ದಾಖಲೆ ಸೃಷ್ಟಿಮಾಡಿಕೊಂಡು ದಾಖಲೆ ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ. ಸದರಿ ಸೈಟ್ ಅನ್ನು ಸುಧಾ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಈ ಬಗ್ಗೆ ಚಾಸಃ1 ರವರು ದೂರನ್ನು ದಾಖಲು ಮಾಡಿರುತ್ತಾರೆ. ದೂರು ಕೊಟ್ಟ ನಂತರ ಪೋಲಿಸರು ಚಿಂತಾಮಣಿಯ ಉಪ ನೊಂದಣಿ ಕಛೇರಿಗೆ ಬಂದು ದಾಖಲೆಗಳನ್ನು ಪರಿಶೀಲಿಸಿ ಪಡೆದುಕೊಂಡು

ಪಂಚನಾಮೆಯನ್ನು ಮಾಡಿ ಪಂಚನಾಮೆ ಕಾಲಕ್ಕೆ ಒಂದು ಪತ್ರವನ್ನು ಪಡೆದಿರುತ್ತಾರೆ ಆಗ ಸಮಯ 11 ರಿಂದ 11-50 ಆಗಿರುತ್ತದೆ. ಆಗ ಯಾರು ಇರುತ್ತಾರೆ ಅಂತ ನೆನಪಿರುವುದಿಲ್ಲ. ನಂತರ ಪೋಲೀಸ್ ಠಾಣೆಯಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಅಮಾನತ್ ಪಡಿಸಿಕೊಂಡಿರುತ್ತಾರೆ ಆಗ ಸಮಯ 11 ರಿಂದ 12 ಗಂಟೆಯಾಗಿರುತ್ತದೆ. ಆ ಕಾಲಕ್ಕೆ ಯಾರಿರುತ್ತಾರೆ ಅಂತ ನೆನಪಿರುವುದಿಲ್ಲ.

ದಿಃ03-05-2017 ರ ದಾಖಲೆಗಳ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯು ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ದಿಃ08-07-17 ರಂದು ಶುದ್ಧಕ್ರಯ ಪತ್ರದ ಅಮಾತನ್ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯು ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ದೃಢೀಕೃತ ಕ್ರಯ ಪತ್ರದ ನಕಲನ್ನು ಸಾಕ್ಷಿ ನೋಡಿ ಗುರತುಸಿದ್ದು ಅದನ್ನು ನಿಪಿ4 ಎಂದು, ಇ ಸಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಶುದ್ಧ ಕ್ರಯಪತ್ರದ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಸಮಯ ಕೋರಿದ್ದು 100 ರೂ ವೆಚ್ಚದೊಂದಿಗೆ ಮುಂದೂಡಲಾಯಿತು.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 116/2019 | | | |
| ಸಾಕ್ಷಿದಾರರ ಹೆಸರು | ಕೃಷ್ಣಪ್ಪ | | |
| ತಂದೆ ಹೆಸರು | ಸುಬ್ರಮಣಪ್ಪ | ಪಿಡಬ್ಲ್ಯೂ: | 3 |
| ವಯಸ್ಸು | 55 ವರ್ಷ | ಸಿಡಬ್ಲ್ಯೂ: | 3 |
| ಉದ್ಯೋಗ | ವ್ಯವಸಾಯ | ಪ್ರಮಾಣ ವಚನ | |
| ವಾಸ ಸ್ಥಳ | ಪಾಪತಿಮ್ಮನಹಳ್ಳಿ | ಭೋದಿಸಿದ ದಿನಾಂಕ | 22-06-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುತ್ತಾರೆ. ಚಾಸ-1 ನನ್ನ ಚಿಕ್ಕಪ್ಪನ ಮಗ, ಚಾಸ-2 ನನ್ನ ತಮ್ಮ. 1 ನೇ ಆರೋಪಿ ನನ್ನ ಚಿಕ್ಕಪ್ಪ. 2 ಮತ್ತು 4 ನೇ ಆರೋಪಿಗಳು ಗೊತ್ತಿರುವುದಿಲ್ಲ. ನಮ್ಮದು ಮೊದಲಿಗೆ ಒಟ್ಟು ಕುಟುಂಬ ಇದ್ದು ಆಸ್ತಿ ಇದ್ದು ಸುಮಾರು ವರ್ಷದ ಹಿಂದೆ ನನ್ನ ದೊಡ್ಡಪ್ಪನಾದ ಪಟೇಲ್ ವೆಂಕಟರಾಯಪ್ಪ ಜಮೀನನ್ನು ಗೋಪಸಂದ್ರದ ಊಲವಾಡಿ ಗ್ರಾಮದ ಖಾತೆ ನಂ.621/241/3 ಸೈಟ್ ಅನ್ನು 30 ಇಂಟು 40 ಅಡಿಗಳ ನಿವೇಶನವನ್ನು ಚಿಕ್ಕವೆಂಕಟಪ್ಪರವರಿಂದ ಖರೀದಿ ಮಾಡಿದ್ದು, ನನ್ನ ದೊಡ್ಡಪ್ಪ 1991 ರಲ್ಲಿ ಮೃತಪಟ್ಟಿದ್ದು 2013 ನೇ ಇಸ್ವಿಯಲ್ಲಿ ನನ್ನ ಚಿಕ್ಕಪ್ಪನಾದ ವೆಂಕಟರಾಯಪ್ಪರವರು ನಾನೇ ವೆಂಕಟರಾಯಪ್ಪ ಅಂತ ಹೇಳಿ ನಕಲು ದಾಖಲೆ ಸೃಷ್ಟಿಮಾಡಿಕೊಂಡು ದಾಖಲೆ ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ. ಸದರಿ ಸೈಟ್ ಅನ್ನು ಸುಧಾ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಈ ಬಗ್ಗೆ ಚಾಸ-1 ರವರು ದೂರನ್ನು ದಾಖಲು ಮಾಡಿರುತ್ತಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಸಮಯ ಕೋರಿದ್ದು 100 ರೂ ವೆಚ್ಚದೊಂದಿಗೆ ಮುಂದೂಡಲಾಯಿತು.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.